1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ

ಸಿ.ಸಿ ನಂ. 82/2017

ಪಿಡಬ್ಲ್ಯೂ 3 ಸಿಡಬ್ಲ್ಯೂ 2

ಸಾಕ್ಷಿಯನ್ನು ತಾ:- 04.07.2025 ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಮಾದಯ್ಯ |
| ತಂದೆಯ/ಗಂಡನ ಹೆಸರು | ಕುನ್ನಮರಿಗೌಡ |
| ವಯಸ್ಸು | 40 |
| ಉದ್ಯೋಗ | ವ್ಯವಸಾಯ |
| ವಾಸ | ಚನ್ನಪಿಳ್ಳಿಕೊಪ್ಪಲು ಗ್ರಾಮ. |

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ

1. ಚಾಸಾ.1 ನನ್ನ ಚಿಕ್ಕಪ್ಪ . ಚಾಸ 3 ನನ್ನ ಚಿಕ್ಕಮ್ಮ. ಚಾಸ 4 ರಿಂದ 7 ರವರ ಪರಿಚಯ ಇರುತ್ತದೆ.
2. ದಿಃ 11.10.2016 ರಂದು ಮದ್ಯಾಹ್ನ 1 ಗಂಟೆಗೆ ನಮ್ಮ ಮನೆಯಮುಂದಿನ ಖಾಲಿ ಜಾಗದಲ್ಲಿ ಈ ಪ್ರಕರಣದ 1ನೆ ಆರೋಪಿಯು ಸರ್ವೆಯರನ್ನು ಕರೆದುಕೊಂಡು ಬಂದು ಅಳತೆ ಮಾಡಿಸುತ್ತಿದ್ದು ಅಲ್ಲಿಗೆ ಹೋಗಿ ನಾನು ಚಾಸ 1 ರವರು ಕೂಡ ಬಂದು 1ನೆ ಆರೋಪಿ ಜೊತೆ ಯಾಕೆ ಅಳತೆ ಮಾಡಿಸುತ್ತಿದ್ದಿರಿ ಎಂದು ಕೇಳಿದಾಗ ನಿಮಗೆ ಎಲ್ಲಿ ಜಾಗ ಇದ್ದದು ನಮ್ಮ ಅಪ್ಪ ತೀರಿದ ನಂತರ ನಮ್ಮ ತಾಯಿ ಹೆಸರಿಗೆ ಖಾತೆ ಬದಲಾಯಿಸಿಕೊಂಡಿದ್ದೇನೆ ಎಂದು ಹೇಳಿದನು. ನಂತರ ತೀಟೆ ಜಗಳ ತೆಗೆದು ಈ ಪ್ರಕರಣದ ಆರೋಪಿಗಳು ಅಲ್ಲೇ ಬಿದ್ದಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಚಾಸ 1 ರವರ ಮಂಡಿಗೆ ಮೈಕೈಗೆ ಹೊಡೆದು ಹಲ್ಲೆ ಮಾಡಿದರು. ನಂತರ 2 ಮತ್ತು 3ನೆ ಆರೋಪಿಗಳು ಮೈಕೈಗೆ ಗುದ್ದಿ ಕಲ್ಲನ್ನು ತೆಗೆದುಕೊಂಡು ಎಡಗಣ್ಣಿನ ಕೆಳಭಾಗಕ್ಕೆ ಹೊಡೆದರು. ಅಷ್ಟಕ್ಕೆ

ಚಾಸ 3 ರವರು ಬಂದು ಯಾಕೆ ನನ್ನ ಗಂಡನಿಗೆ ಹೊಡೆಯುತಿರಿ ಎಂದು ಕೇಳಿದಾಗ 1 ನೆ ಆರೋಪಿ ಆಕೆಯನ್ನು ಹಿಡಿದು ಎಳೆದಾಡಿ ಕೈಯಿಂದ ಗುದ್ದಿದರು. ನಂತರ ಗಲಾಟೆ ಸ್ಥಳಕ್ಕೆ ಚಾಸ 4 , 5 ಬಂದು ಜಗಳವನ್ನು ಬಿಡಿಸಿದರು. ನಂತರ ಆರೋಪಿಗಳು ಮತ್ತೆ ಜಾಗ ವಿಚಾರಕ್ಕೆ ಬಂದರೆ ಕೊಲೆ ಮಾಡುತ್ತೇವೆ ಎಂದು ಹೇಳಿ ಹೊರಟುಹೋದರು. ನಾನು ಮತ್ತು ಚಾಸ 1 ಮಂಡ್ಯ ಜಿಲ್ಲಾಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ಚಸ 1 ರವರು ಕಿರುಗಾವಲು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದರು. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲು ಮತ್ತು ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೆ ಮುಮ 1 ಮತ್ತು 2 ಎಂದು ಗುರುತಿಸಲಾಗಿದೆ. ಸದರಿ ವಿಚಾರವನ್ನು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ- ಆರೋಪಿ ಪರ** ಎಂ ಎಸ್ **ವಕೀಲರಿಂದಃ-**

ದಿಃ 11.10.2016 ಸಮಯ 12 ಗಂಟೆಗೆ 1 ನೆ ಆರೋಪಿ ಜಮೀನಿನ ಸರ್ವೆ ನಂ.322/2 ಅಳತೆ ಮಾಡಲು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಸ.ನಂ 1 ನೆ ಆರೋಪಿ ತಾಯಿ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ಮಾಡುವ ಸಮಯದಲ್ಲಿ ನಾನು , ಚಾಸ 1 ಅಳತೆ ಮಾಡಬೇಡಿ ಎಂದು ಅಡ್ಡಿಪಡಿಸಿರುತ್ತೇವೆ. ಅಳತೆ ಮಾಡುವ ಸಮಯದಲ್ಲಿ ನಾನು , ಚಾಸ 1 ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಹಲ್ಲೆ ಮಾಡಿರುವುದರಿಂದ ಆರೋಪಿಗಳು ನಮ್ಮ ಮೇಲೆ ದೂರು ದಾಖಲು ಮಾಡಿ ಇದೇ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ನನ್ನ ವಿರುದ್ಧ ಪ್ರ.ವ.ವ ಸಲ್ಲಿಸಿದ ಮೇಲೆ ಆಸ್ಪತ್ರೆಗೆ ದಾಖಲಾಗಿರುತ್ತೇನೆ ಎಂದರೆ ಸರಿ. ಸ.ನಂ 322/2 ಕ್ಕೆ ಸಂಬಂಧಿಸಿದತೆ ಪಾಲುವಿಭಾಗ ವ್ಯಾಜ್ಯ ಇದು ಅದು ವಜಾ ಆಗಿರುತ್ತದೆ ಎಂದರೆ ಸರಿ. ಘಟನ ಸ್ಥಳ 12 ಗಂಟೆ

ಹೊರತುಪಡಿಸಿ ಪುನಃ ಯಾವುದೇ ಗಲಾಟೆ ನಡೆದಿರುವುದಿಲ್ಲ. ಚಾಸ 1 ಜಮೀನು ಪಡೆದುಕೊಳ್ಳಲು ಸುಳ್ಳು ದೂರುನೀಡಿರುತ್ತೇವೆ ಎಂದರೆ ಸರಿಯಲ್ಲ. 2 ಮತ್ತು 3 ನೆ ಆರೋಪಿಯು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿಂಗಮ್ಮ ಸ್ಥಳದಲ್ಲಿ ಇರಲಿಲ್ಲ 1 ನೆ ಆರೋಪಿ ಅವರನ್ನು ಎಳೆದಾಡಿರುವುದಿಲ್ಲ ಎಂದರೆ ಸರಿಯಲ್ಲ. ನನಗು ಮತ್ತು ಚಾಸ 1 ರವರಿಗೆ ಆರೋಪಿಗಳು ಯಾವುದೇ ರೀತಿ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ಮೇಲೆ ದೂರು ದಾಖಲಾದ ಕಾರಣ ನಾವು ದೂರು ಕೊಟ್ಟಿರುತ್ತೇವೆ ಎಂದರೆ ಸರಿ. ಮುಮ 1 ಪ್ರತ್ಯೇಕವಾಗಿ ಅದೇ ಎಂದು ಹೇಳಲು ಪ್ರತ್ಯೇಕವಾಗಿ ಏನು ಇಟ್ಟುಕೊಂಡಿರುವುದಿಲ್ಲ ಅವುಗಳು ಮನೆ ಮುಂದೆ ಇಟ್ಟಿರುವ ವಸ್ತುಗಳಾಗಿರುತ್ತವೆ. ಆರೋಪಿ ಕೊಟ್ಟಿರುವ ದೂರಿನ ತಪ್ಪಿಸಲು ಸುಳ್ಳು ದೂರುದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಯಾವುದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ನಾನು ಮತ್ತು ಚಾಸ 1 ಇಬ್ಬರೆ ಹೋಗಿರುತ್ತೇವೆ. ನಾವು ವೈದ್ಯರಿಗೆ ಸುಳ್ಳು ಮಾಹಿತಿ ಕೊಟ್ಟು ಯಾವುದೆ ಗಾಯಗಳು ಆಗದೆ ಇದ್ದರು ಸಹ ಸುಳ್ಳು ಪ್ರಮಾಣಪತ್ರ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ